## ಪ್ರಾರ್ಥನೆ

### ದೇವೀಮಾಹಾತ್ಮ್ಯದಿಂದ

ದೇವಿ ಪ್ರಪನ್ನಾರ್ತಿಹರೇ ಪ್ರಸೀದ
ಪ್ರಸೀದ ಮಾತರ್ಜಗತೋಽಖಿಲಸ್ಯ ।
ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ
ತ್ವಮೀಶ್ವರೀ ದೇವಿ ಚರಾಚರಸ್ಯ ॥ XI.2

ಅಮ್ಮ, ನಿನ್ನಲ್ಲಿ ಶರಣಾಗತರಾದವರ ಸಂಕಷ್ಟಗಳನ್ನೆಲ್ಲ ದೂರ ಮಾಡುವವಳು ನೀನು. ನೀನು ಇಡೀ ಜಗತ್ತಿಗೇ ಜನನಿ. ನಿನ್ನ ಕರುಣೆ ನಮ್ಮೆಲ್ಲರ ಮೇಲಿರಲಿ. ಓ ತಾಯಿ, ನೀನು ಈ ಜಗತ್ತಿನ ಒಡತಿ, ಚರಾಚರಗಳೆಲ್ಲವನ್ನೂ ನಿಯಂತ್ರಿಸುವವಳು ನೀನು. ಈ ವಿಶ್ವವನ್ನು ರಕ್ಷಿಸು, ಎಲ್ಲರ ಮೇಲೆ ನಿನ್ನ ದಯೆಯಿರಲಿ.

ತ್ವಂ ವೈಷ್ಣವೀ ಶಕ್ತಿರನಂತವೀರ್ಯಾ
ವಿಶ್ವಸ್ಯ ಬೀಜಂ ಪರಮಾಽಸಿ ಮಾಯಾ ।
ಸಮ್ಮೋಹಿತಂ ದೇವಿ ಸಮಸ್ತಮೇತತ್
ತ್ವಂ ವೈ ಪ್ರಸನ್ನಾ ಭುವಿ ಮುಕ್ತಿಹೇತುಃ ॥ XI, 4

ಹೇ ತಾಯಿ! ಅನಂತ ಶಕ್ತಿಯುಳ್ಳ ನೀನೇ ಈ ವಿಶ್ವವನ್ನು ವ್ಯಾಪಿಸಿರುವೆ, ಇದಕ್ಕೆ ಮೂಲ ಕಾರಣವಾಗಿರುವೆ. ಈ ಜಗತ್ತು ನಿನ್ನಲ್ಲಿಯೇ ಲಯವಾಗುವುದು, ನಿನ್ನಿಂದಲೇ ಹೊರಹೊಮ್ಮುವುದು. ಈ ಇಡೀ ವಿಶ್ವವನ್ನು ನಿನ್ನ ಮೋಹಗೊಳಿಸುವ ರೂಪ ವೈವಿಧ್ಯದಿಂದ ಮರುಳು ಮಾಡಿರುವೆ ನೀನು. ಹೇ ಪರಮೇಶ್ವರಿ, ಪ್ರಸನ್ನಳಾಗಿ ನಮಗೆ ಮುಕ್ತಿಯನ್ನು ದಯಪಾಲಿಸುವವಳೂ ನೀನೇ.

ವಿದ್ಯಾಃ ಸಮಸ್ತಾಃ ತವ ದೇವಿ ಭೇದಾಃ
ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು ।
ತ್ವಯೈಕಯಾ ಪೂರಿತಮಂಬಯೈತತ್
ಕಾ ತೇ ಸ್ತುತಿಃ ಸ್ತವ್ಯಪರಾಪರೋಕ್ತಿಃ ॥ XI,5

ನಮಗೆ ತಿಳಿದಿರುವ ಎಲ್ಲ ವಿದ್ಯೆಗಳೂ ನಿನ್ನಿಂದಲೇ ಬಂದಿವೆ. ನಾವು ನೋಡುವ ಎಲ್ಲ ಸ್ತ್ರೀಯರೂ ನಿನ್ನ ಬೇರೆ ರೂಪಗಳಷ್ಟೆ. ಎಲೈ ಜನನಿ, ನಿನ್ನಿಂದಲೇ ಈ ವಿಶ್ವವು ವ್ಯಾಪಿಸಲ್ಪಟ್ಟಿದೆ. ಇಂತಹ ನಿನ್ನನ್ನು ಹೇಗೆ ತಾನೆ ಕೊಂಡಾಡುವುದು? (ನಮ್ಮ ಅಲ್ಪ ಮತಿಯಿಂದ ಮಾಡುವ) ಎಲ್ಲ ಸ್ತುತಿಗಿಂತಲೂ ಮಿಗಿಲಾದವಳು ನೀನಲ್ಲವೇ?

## ಸೂಕ್ತಿಪ್ರಭ

- ನಿಮಗೆ ಯಾರೋ ತೊಂದರೆಕೊಟ್ಟಿದ್ದರೆ, ಅದೇನೂ ಅಂಥ ಮಹತ್ವದ ವಿಷಯವಲ್ಲ, – ನೀವು ಅದನ್ನು ನೆನಪಿನಲ್ಲಿ ಇರಿಸಿಕೊಳ್ಳದಿದ್ದರೆ!

  ಕನ್ಫ್ಯೂಷಿಯಸ್

- **ವ್ಯ**ಕ್ತಿತ್ವ ಉಳಿಯಬೇಕಾದರೆ ಒಂದೆರಡಾದರೂ ಕೊರತೆಗಳು ಇರಲೇಬೇಕು.

  ಗಯಟೆ

- **ಈ**ಗಾಗಲೇ ಏನೇನು ಮಾಡಿ ಆಗಿದೆ ಎಂಬುದನ್ನು ನಾನು ನೋಡುವುದಿಲ್ಲ. ಏನೇನು ಮಾಡಲು ಬಾಕಿಯಿದೆ ಎಂದು ಮಾತ್ರ ನೋಡುತ್ತೇನೆ.

  – ಮೇರಿ ಕ್ಯೂರಿ

- **ಮ**ಳೆ ಬಂದಾಗ ಎಲ್ಲ ಹಕ್ಕಿಗಳೂ ಆಶ್ರಯವನ್ನು ಅರಸಿ ಮರಗಿಡಗಳಲ್ಲಿ ಅವಿತುಕೊಳ್ಳುತ್ತವೆ. ಆದರೆ ಹದ್ದು ಎತ್ತರಕ್ಕೆ ಏರಿ, ಮಳೆಗರೆಯುವ ಮೋಡಗಳಿಗಿಂತಲೂ ಮೇಲೇರಿ ವಿಹರಿಸುತ್ತದೆ. ಸಮಸ್ಯೆಗಳು ಎಲ್ಲರಿಗೂ ಇರುತ್ತವೆಯಾದರೂ ಅದನ್ನು ಎದುರಿಸುವ ದೃಷ್ಟಿಯಂತೆ ಅದು **ಭಾರವೋ, ಹಗುರವೋ** ಆಗುತ್ತದೆ.

- **ಕೆ**ಲವರು ಪ್ರಜ್ವಲಿಸುತ್ತಿರುವ ದೀಪಗಳಂತಿರುತ್ತಾರೆ. ಇತರರ ಜೀವನವನ್ನು ಬೆಳಗಬಲ್ಲ ಸಾಮರ್ಥ್ಯ ಇವರಿಗಿರುತ್ತದೆ. ಆದರೆ ತೈಲ ಮತ್ತು ಬತ್ತಿಗಳು ಇರಬೇಕಾದಲ್ಲಿ ಉಕ್ಕಿನಂತಹ ವಸ್ತು ಇದ್ದರೆ ದೀಪ ಹೊತ್ತಿಸುವುದಾದರೂ ಹೇಗೆ?

**ವ್ಯ**ಕ್ತಿಗಳು ಮುದುಕರಾಗುವುದಿಲ್ಲ. ಅವರು ಬೆಳೆಯುವುದನ್ನು ನಿಲ್ಲಿಸಿದಾಗ ಮುದಿತನ ಅವರನ್ನು ಆವರಿಸುತ್ತದೆ.

**ಸುಂ**ದರ ಬದುಕು ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ಪ್ರಾರ್ಥನೆ, ವಿನಯಶೀಲ ನಡತೆ, ತ್ಯಾಗ ಮನೋಭಾವ ಹಾಗೂ ನೈಜಪ್ರೀತಿಯ ಅಭ್ಯಾಸದಿಂದ, ಸ್ವಲ್ಪಮಟ್ಟಿಗಾದರೂ ಸರಿಯೇ, ಪ್ರತಿನಿತ್ಯವೂ ಮಾಡುವ ಪ್ರಯತ್ನದಿಂದ ಅದು ಸಿದ್ಧಿಸುತ್ತದೆ.

**ಪ್ರ**ಕೃತಿ ನಿನಗೆ ಮುಖವನ್ನು ನೀಡಿದ್ದಾಳೆ. ಆದರೆ ಅದಕ್ಕೆ ಭಾವ ತುಂಬ**ಬೇಕಾಗಿರುವುದು** ನೀನೇ, ಎಚ್ಚರ! ನಿನ್ನ ಮುಖದ ಪ್ರತಿಯೊಂದು ಭಾವವೂ ಮತ್ತೊಬ್ಬರ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತಿರುತ್ತದೆ.